**ಸಂಸ್ಕೃತ ಶಿಕ್ಷಣ ನಿರ್ದೇಶನಾಲಯ**
**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560018.

**संस्कृतशिक्षणनिर्देशनालयः**
**कर्नाटकसंस्कृतविश्वविद्यालयः**
पम्पमहाकविमार्गः, चामराजपेटे, बेङ्गलूरु-५६००१८


ಕಸಂವಿ/ಸಂಶಿನಿ/ಪ್ರಕಾ.ಸಾ/ಪಠ್ಯವಸ್ತು ಅನುಷ್ಠಾನ-01/17/2012-13 ದಿನಾಂಕ: 18.07.2012

## ಸುತ್ತೋಲೆ

ವಿಷಯ: ಸಂಸ್ಕೃತ ಪ್ರಥಮಾ, ಕಾವ್ಯ ಮತ್ತು ಸಾಹಿತ್ಯ ತರಗತಿಗಳ ಅಧ್ಯಯನ ಅವಧಿ ಮತ್ತು 2012-13ನೇ ಶೈಕ್ಷಣಿಕ ವರ್ಷದಿಂದ ನೂತನ ಪಠ್ಯವಿಷಯಗಳನ್ನು ಅನುಷ್ಠಾನಗೊಳಿಸುವ ಬಗೆಗೆ.

ಉಲ್ಲೇಖ: 30.06.2012ರಂದು ನಡೆದ ಪ್ರಶಿಕ್ಷಣ ಪರಷತ್ತಿನ 4ನೇ ಸಭೆಯ ನಿರ್ಣಯದಂತೆ.

2012-13ನೇ ಸಾಲಿನಿಂದ ಪ್ರಥಮಾ 03 ವರ್ಷಗಳು, ಕಾವ್ಯ 03 ವರ್ಷಗಳು ಮತ್ತು ಸಾಹಿತ್ಯ 02 ವರ್ಷಗಳ ತರಗತಿಗಳ ಅಧ್ಯಯನ ಅವಧಿಯನ್ನಾಗಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪರಿನಿಯಮ 2012ರಂತೆ ನಿಗದಿಗೊಳಿಸಲಾಗಿದೆ. ಇದರೊಂದಿಗೆ ಈ ಮೇಲ್ಕಂಡ ಎಲ್ಲ ತರಗತಿಗಳ ಪಠ್ಯ ವಿಷಯಗಳನ್ನು ಪರಿಷ್ಕರಿಸಿದ್ದು, ಇದನ್ನು ರಾಜ್ಯದ ಎಲ್ಲ ಅನುದಾನಿತ ಹಾಗೂ ಅನುದಾನ ರಹಿತ ಸಂಸ್ಕೃತ ಪಾಠಶಾಲೆಗಳು ಅನುಸರಿಸತಕ್ಕದ್ದು.

| ಪ್ರಥಮಾ | | |
|---|---|---|
| ಕ್ರ.ಸಂ | ಪತ್ರಿಕೆಗಳು/ಪಠ್ಯವಿಷಯ | ಅಂಕಗಳು |
| 01. | ಪತ್ರಿಕೆ - 01<br>ಗದ್ಯ ಮತ್ತು ಪದ್ಯ | 100 |
| 02. | ಪತ್ರಿಕೆ - 02<br>ಅಮರ, ಶಬ್ದ, ಭಾಷಾಂತರ | 100 |
| | ಒಟ್ಟು ಅಂಕಗಳು | 200 |

| ಕಾವ್ಯ | | | ಸಾಹಿತ್ಯ | | |
|---|---|---|---|---|---|
| ಕ್ರ.ಸಂ | ಪತ್ರಿಕೆಗಳು/ಪಠ್ಯವಿಷಯ | ಅಂಕಗಳು | ಕ್ರ.ಸಂ | ಪತ್ರಿಕೆಗಳು/ಪಠ್ಯವಿಷಯ | ಅಂಕಗಳು |
| | ಭಾಗ-I | | | ಭಾಗ-I | |
| 01. | ಪತ್ರಿಕೆ - 01<br>ಭಾಷೆ-01 : ಕನ್ನಡ/ಸಂಸ್ಕೃತ | 125 | 01. | ಪತ್ರಿಕೆ - 01<br>ಭಾಷೆ-01 : ಸಂಸ್ಕೃತ/ಇಂಗ್ಲೀಷ್ | 100 |
| 02. | ಪತ್ರಿಕೆ - 02<br>ಭಾಷೆ-02 : ಇಂಗ್ಲೀಷ್ | 100 | 02. | ಪತ್ರಿಕೆ - 02<br>ಭಾಷೆ-02 : ಇಂಗ್ಲೀಷ್/ಕನ್ನಡ/ಹಿಂದಿ | 100 |
| | ಅಂಕಗಳು | 225 | | ಅಂಕಗಳು | 200 |
| | ಭಾಗ- II | | | ಭಾಗ-II | |
| 03. | ಪತ್ರಿಕೆ - 03<br>ಗದ್ಯ ಕಾವ್ಯ | 100 | 03. | ಪತ್ರಿಕೆ - 03<br>ಗದ್ಯ, ಪದ್ಯ, ಚಂಪೂ, ಛಂದಸ್ಸು | 100 |
| 04. | ಪತ್ರಿಕೆ -04<br>ಪದ್ಯ ಕಾವ್ಯ | 100 | 04. | ಪತ್ರಿಕೆ - 04<br>ನಾಟಕ, ನಾಟಕ ಲಕ್ಷಣ, ಅಲಂಕಾರ, ಭಾಷಾಂತರ | 100 |
| 05. | ಪತ್ರಿಕೆ - 05<br>ನಾಟಕ ಮತ್ತು ಚಂಪೂ | 100 | 05. | ಪತ್ರಿಕೆ - 05<br>ವ್ಯಾಕರಣ | 100 |
| 06. | ಪತ್ರಿಕೆ - 06<br>ವ್ಯಾಕರಣ ಮತ್ತು ಅಮರಕೋಶ | 100 | 06. | ಪತ್ರಿಕೆ - 06<br>ನ್ಯಾಯಶಾಸ್ತ್ರ | 100 |
| | ಅಂಕಗಳು | 400 | | ಅಂಕಗಳು | 400 |
| | ಒಟ್ಟು ಅಂಕಗಳು | 625 | | ಒಟ್ಟು ಅಂಕಗಳು | 600 |

P.T.O.........

01. ಪ್ರಥಮಾ 01, 02, । ಕಾವ್ಯ 01,02 । ಸಾಹಿತ್ಯ 01ನೇ ತರಗತಿಗಳಿಗೆ ಪಾಠಶಾಲಾ ಹಂತದಲ್ಲಿಯೇ ವಾರ್ಷಿಕ ಪರೀಕ್ಷೆಗಳನ್ನು ನಡೆಸತಕ್ಕದ್ದು. ಅದರ ದಾಖಲಾತಿಗಳನ್ನು ಸಂರಕ್ಷಿಸಿ, ಶಾಲಾ ಪರಿಶೀಲನ ಸಮಯದಲ್ಲಿ ತೋರಿಸಬೇಕು.

02. ಕಾವ್ಯ 01ನೇ ತರಗತಿಗೆ ಸಾಮಾನ್ಯ ಶಿಕ್ಷಣದ 08ನೇ ತರಗತಿಯ ಪ್ರಥಮ ಭಾಷೆಯು ಮತ್ತು ದ್ವಿತೀಯ ಭಾಷೆಯು ಕ್ರಮವಾಗಿ 01 ಮತ್ತು 02ನೇ ಪತ್ರಿಕೆಯ ಪಠ್ಯ ವಿಷಯವಾಗಿರುತ್ತದೆ. ಕಾವ್ಯ 02ನೇ ತರಗತಿಗೆ ಸಾಮಾನ್ಯ ಶಿಕ್ಷಣದ 09ನೇ ತರಗತಿಯ ಪ್ರಥಮ ಭಾಷೆಯು ಮತ್ತು ದ್ವಿತೀಯ ಭಾಷೆಯು ಕ್ರಮವಾಗಿ 01 ಮತ್ತು 02ನೇ ಪತ್ರಿಕೆಯ ಪಠ್ಯ ವಿಷಯವಾಗಿರುತ್ತದೆ. ಕಾವ್ಯ 03ನೇ ತರಗತಿಗೆ ಸಾಮಾನ್ಯ ಶಿಕ್ಷಣದ 10ನೇ ತರಗತಿಯ ಪ್ರಥಮ ಭಾಷೆಯು ಮತ್ತು ದ್ವಿತೀಯ ಭಾಷೆಯು ಕ್ರಮವಾಗಿ 01 ಮತ್ತು 02ನೇ ಪತ್ರಿಕೆಯ ಪಠ್ಯ ವಿಷಯವಾಗಿರುತ್ತದೆ. ಈ ಭಾಷಾ ಭಾಗದಲ್ಲಿ ಈಗಾಗಲೇ ಪರೀಕ್ಷೆಯನ್ನು ಬರೆದ/ಬರೆಯುತ್ತಿರುವ ವಿದ್ಯಾರ್ಥಿಗಳು ವಿನಾಯಿತಿ ಪಡೆಯಬಹುದಾಗಿದೆ.

03. ಸಾಹಿತ್ಯ 01ನೇ ತರಗತಿಗೆ ಸಾಮಾನ್ಯ ಶಿಕ್ಷಣದ ಪ್ರಥಮ ಪದವಿಪೂರ್ವ ಶಿಕ್ಷಣದ ಪ್ರಥಮ ಭಾಷೆಯು ಮತ್ತು ದ್ವಿತೀಯ ಭಾಷೆಯು ಕ್ರಮವಾಗಿ 01 ಮತ್ತು 02ನೇ ಪತ್ರಿಕೆಯ ಪಠ್ಯ ವಿಷಯವಾಗಿರುತ್ತದೆ. ಸಾಹಿತ್ಯ 02ನೇ ತರಗತಿಗೆ ಸಾಮಾನ್ಯ ಶಿಕ್ಷಣದ ದ್ವಿತೀಯ ಪದವಿಪೂರ್ವ ಶಿಕ್ಷಣದ ಪ್ರಥಮ ಭಾಷೆಯು ಮತ್ತು ದ್ವಿತೀಯ ಭಾಷೆಯು ಕ್ರಮವಾಗಿ 01 ಮತ್ತು 02ನೇ ಪತ್ರಿಕೆಯ ಪಠ್ಯ ವಿಷಯವಾಗಿರುತ್ತದೆ. ಈ ಭಾಗದಲ್ಲಿ ಈಗಾಗಲೇ ಪರೀಕ್ಷೆಯನ್ನು ಬರೆದ/ಬರೆಯುತ್ತಿರುವ ವಿದ್ಯಾರ್ಥಿಗಳು ವಿನಾಯಿತಿ ಪಡೆಯಬಹುದಾಗಿದೆ.

ವಿಶೇಷ ಸೂಚನೆ:

**ಕಾವ್ಯ 01, 02 ಮತ್ತು 03ನೇ ತರಗತಿಗಳಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳು ಸಾಮಾನ್ಯ ಶಿಕ್ಷಣದ 08, 09 ಮತ್ತು 10ನೇ ತರಗತಿಗಳಲ್ಲಿ ಅಧ್ಯಯನ ಮಾಡುತ್ತಿದ್ದರೆ ಅಂತಹ ವಿದ್ಯಾರ್ಥಿಗಳಿಗೆ ಪತ್ರಿಕೆ 01 ಮತ್ತು 02ಕ್ಕೆ ವಿನಾಯಿತಿ ಇರುತ್ತದೆ. ಇದಕ್ಕೆ ಆಯಾಯಾ ವಿದ್ಯಾರ್ಥಿಗಳು ಓದುತ್ತಿರುವ ಸಾಮಾನ್ಯ ಶಾಲಾ ಮುಖ್ಯಸ್ಥರಿಂದ ಅನುಮತಿ ಪತ್ರವನ್ನು ಪಡೆಯುವುದು ಕಡ್ಡಾಯವಾಗಿರುತ್ತದೆ. ವಯೋಮಾನದ ಆಧಾರದ ಮೇಲೆ ಖಾಸಗಿಯಾಗಿ ಪರೀಕ್ಷೆಯನ್ನು ಬರೆಯುವವರೂ ಬಯಸಿದಲ್ಲಿ ಈ ವಿನಾಯಿತಿಯನ್ನು ಪಡೆಯಬಹುದಾಗಿದೆ. ವಿನಾಯಿತಿ ಪಡೆದಿರುವ ಅಭ್ಯರ್ಥಿಗಳಿಗೆ ಆ ಪತ್ರಿಕೆಗಳಲ್ಲಿ ವಿನಾಯಿತಿ ನೀಡಿ ಕೇವಲ 2ನೇ ಭಾಗದ ಪತ್ರಿಕೆಗಳ ಫಲಿತಾಂಶವನ್ನು ಮಾತ್ರ ನೀಡಲಾಗುತ್ತದೆ. ಈ ಭಾಗದ ಫಲಿತಾಂಶವನ್ನು ಮಾತ್ರ ಪರಿಗಣಿಸಿ ಪರೀಕ್ಷೆ ಉತ್ತೀರ್ಣತೆಯನ್ನು ಘೋಷಿಸಲಾಗುತ್ತದೆ.**

ಮೇಲಿನಂತೆ ಪ್ರಥಮಾ–3ನೇ ತರಗತಿ, ಕಾವ್ಯ– 3ನೇ ತರಗತಿ ಮತ್ತು ಸಾಹಿತ್ಯ–2ನೇ ತರಗತಿಗಳಿಗೆ ಶೈಕ್ಷಣಿಕ ವರ್ಷ 2012–13ರ ರಿಂದ ತರಗತಿಗಳು ಮತ್ತು ವಾರ್ಷಿಕ ಪ್ರಸಿದ್ಧ ಪರೀಕ್ಷಾಕ್ರಮವು ಅನ್ವಯವಾಗುತ್ತದೆ.

Sivara

ನಿರ್ದೇಶಕರು

ಇವರಿಗೆ

ಪ್ರಾಚಾರ್ಯರು/ಮುಖ್ಯೋಪಾಧ್ಯಾಯರು

____________________

____________________

ಪ್ರತಿಗಳು:

1. ಪರೀಕ್ಷಾಂಗ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು
2. ಕುಲಪತಿಗಳ ಕಾರ್ಯಾಲಯ
3. ಕುಲಸಚಿವರ ಕಾರ್ಯಾಲಯ
4. ಕಛೇರಿ ಪ್ರತಿ